ನೌಕರರಿಗೆ ಭವಿಷ್ಯ ನಿಧಿಯ ಯೋಜನೆಯನ್ನು ಜಾರಿಗೆ ತರುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಅರಕಲಗೂಡು ತಾಲ್ಲೂಕು ಮದಗನಹಳ್ಳಿ ಗ್ರಾಮದ ಸರ್ಕಾರಿ ಸ್ಟೋನ್ ಕ್ರಷರ್

1264(1114) ಶ್ರೀ ಪುಟ್ಟಣ್ಣ ಎ. (ಅರಕಲಗೂಡು) :— ಮಾನ್ಯ ಗಣಿ ಮತ್ತು ಭೂವಿಜ್ಞಾನ ಹಾಗೂ ಅಂತರ್ಜಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕು ಮದಗನೂರು ಗ್ರಾಮದ ಸರ್ಕಾರಿ ಸ್ಟೋನ್ ಕ್ರಷರ್‌ನ್ನು ಗುತ್ತಿಗೆ ಬಾಡಿಗೆ ಆಧಾರದ ಮೇಲೆ ನೀಡಲಾಗಿದೆಯೇ;

ಆ) ನೀಡಲಾಗಿದಲ್ಲಿ, ಯಾರಿಗೆ ಯಾವ ದಿನಾಂಕದಿಂದ ಗುತ್ತಿಗೆ ಬಾಡಿಗೆ ಆಧಾರದ ಮೇಲೆ ನೀಡಲಾಗಿದೆ; ಷರತ್ತುಗಳೇನು? ಇದುವರೆಗೆ ಬರುತ್ತಿರುವ ಹಣವೆಷ್ಟು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಹಾಗೂ ಅಂತರ್ಜಲ ಸಚಿವರು) :—

ಅ) ಹಾಸನ ಜಿಲ್ಲೆ, ಅರಕಲಗೂಡು ತಾಲ್ಲೂಕು, ಮದಗನೂರು ಗ್ರಾಮದಲ್ಲಿ ಸರ್ಕಾರಿ ಸ್ಟೋನ್ ಕ್ರಷರ್ ಘಟಕ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಹುಣಸೂರಿನ ತಾಲ್ಲೂಕಿನಲ್ಲಿರುವ ಪಶು ಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವುದು.

1265(1225) ಶ್ರೀ ವಿ. ಶಾಮಣ್ಣ (ಹುಣಸೂರು) :— ಮಾನ್ಯ ಪಶು ಸಂಗೋಪನೆ ಮತ್ತು ಸಣ್ಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಣಸೂರು ತಾಲ್ಲೂಕಿನಾದ್ಯಂತ ಇರುವ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ? ಇದ್ದರೆ ಅವು ಯಾವುವು?

ಆ) ಅಯರಹಳ್ಳಿ ಹನಗೋಡು ಹೋಬಳಿ ಕೇಂದ್ರ ಸ್ಥಳದಲ್ಲಿರುವ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರವನ್ನು ಮೇಲ್ದರ್ಜೆಗೇರಿಸುವ ವಿಷಯ ಪರಿಶೀಲನೆಯಲ್ಲಿದೆಯೇ?

ಇ) ಪರಿಶೀಲನೆಯಲ್ಲಿದ್ದಲ್ಲಿ, ಪ್ರಸ್ತುತ ಯಾವ ಹಂತದಲ್ಲಿದೆ? ಮೇಲ್ದರ್ಜೆಗೇರಿಸಲು ಇರುವ ಮಾನದಂಡಗಳೇನು?

ಈ) ಕೆಲವು ಅಧಿಸೂಚನೆಯಲ್ಲಿ ಈ ಕುರಿತು ಸರ್ಕಾರವು ಭರವಸೆಯನ್ನು ನೀಡಿದ್ದು, ಇದುವರೆಗೆ ಅನುಷ್ಠಾನಗೊಳ್ಳದಿರಲು ಕಾರಣವೇನು?

ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) :—

ಅ) ಹನಗೋಡು ಪ್ರಾಥಮಿಕ ಪಶು ಚಿಕಿತ್ಸಾಲಯವನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಇದ್ದು, ಅದನ್ನು ಮೇಲ್ದರ್ಜೆಗೇರಿಸುವ ಬಗ್ಗೆ ಸರ್ಕಾರದ ಅನುಮೋದನೆ ನೀಡಲಾಗಿದೆ.

ಆ) ಪ್ರಸಕ್ತ ಸಾಲಿನಲ್ಲಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಖಾದಿ ಬಟ್ಟೆಯ ಮೇಲಿನ ರಿಬೇಟ್ ಹಣ ಬಿಡುಗಡೆ.

1268 (1490) ಶ್ರೀ ಪಾಟೀಲ್ ಡಿ.ಆರ್. (ಗದಗ) :— ಮಾನ್ಯ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಖಾದಿ ಬಟ್ಟೆಯ ಮಾರಾಟದ ಮೇಲೆ ಸರ್ಕಾರ ಬಿಡುಗಡೆ ಮಾಡಬೇಕಾದ ರಿಬೇಟ್ ಹಣವೆಷ್ಟು; ಬಿಡುಗಡೆ ಮಾಡಿದ್ದೆಷ್ಟು; ಯಾವಾಗ ಬಿಡುಗಡೆ ಮಾಡಲಾಗಿದೆ; ಕಳೆದ 3 ವರ್ಷಗಳ ವಿವರ ನೀಡುವುದು.

ಆ) ಈ ರಿಬೇಟ್ ಹಣ ನಿಯಮಿತವಾಗಿ ಪ್ರತಿ ತ್ರೈಮಾಸಿಕದಲ್ಲಿ ಒಮ್ಮೆ ಬಿಡುಗಡೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎಸ್.ಆರ್. ಕಾಶಪ್ಪನವರ್ (ಕಣ್ಣಿ ಕೈಗಾರಿಕಾ ಸಚಿವರು) :—

ಅ) ಸರ್ಕಾರವು ಪ್ರತಿ ವರ್ಷ ಖಾದಿ ಉತ್ಪನ್ನಗಳ ಮೇಲ್ಪರೆ ಮಾರಾಟದ ಮೇಲೆ ರಿಯಾಯಿತಿ ನೀಡುತ್ತಾ ಬಂದಿದೆ. ಕಳೆದ 3 ವರ್ಷಗಳಲ್ಲಿನ ರಿಬೇಟ್ ಬಿಡುಗಡೆ ವಿವರ ಕೆಳಕಂಡಂತಿದೆ.

ವರ್ಷ	ರಿಬೇಟ್ ಪೀರ್ಮಿಕೆ ಒದಗಿಸಲಾದ ಮೊತ್ತ (ರೂ.ಲಕ್ಷಗಳಲ್ಲಿ)	ಬಿಡುಗಡೆ ಮಾಡಲಾದ ಆಯವ್ಯಯ ಮತ್ತು ವರ್ಷ (ರೂ.ಲಕ್ಷಗಳಲ್ಲಿ)
1999-2000	450-00	450-00 (99-2000)
2000-2001	200-00	550-00
	350-00	(2000-01)
2001-2002	100-00	100-00 (2001-02)